
ಇದ್ದ ಸೊಸೆಯತ್ತ ನೋಡುತ್ತಾ, 'ನಾನೇನು ಅಂತದ್ದು ಹೇಳಿದೆ ಅಂತ ಇವನು ಹೀಗಾಡ್ತಿದಾನೆ... ನೀನಾದರೂ ಹೇಳಮ್ಮ ಅವನಿಗೆ' ಅಂದಾಗ ಅವಳೂ ಧುಮುಗುಡುತ್ತಾ, 'ಆಸ್ಕ್ ಯುವರ್ ಮಾಮ್ ನಾಟ್ ಟು ಇಂಟರ್ಫಿಯರ್ ಇನ್ ಮೈ ಪರ್ಸನಲ್ ಸ್ಟಫ್' ಎಂದು ಧೊಪ್ಪ ಧೊಪ್ಪನೆ ಹೆಜ್ಜೆ ಹಾಕುತ್ತಾ ಅವಳ ರೂಮಿಗೆ ಹೋದಳು. 'ಮಗ ನನ್ನವನು, ಸೊಸೆ ನನ್ನವಳೆ?' ಎಂಬ ಗಾದೆಯೂ ಸುಳ್ಳೆನಿಸಿತು ಸುನಂದೆಗೆ. ಮಗ, ಸೊಸೆ ಇಬ್ಬರೂ ಯಾವತ್ತಿಗೂ ಒಂದೆ. ತಾವಿಬ್ಬರು ಬೇಕಾದರೆ ಬೆಕ್ಕುನಾಯಿಯ ಹಾಗೆ ಕಚ್ಚಾಡುತ್ತಾರೆ. ಬೇರೆಯವರು ಅವರ ಸಂಗತಿಗೆ ಬಂದರೆ ಒಂದಾಗಿಬಿಡುತ್ತಾರೆ ಅನ್ನಿಸಿತು. ಅದು ಲೋಕಧರ್ಮವೂ ಅನ್ನಿಸಿತು. ಸೊಸೆಯಾಗಿ ಬಂದವಳ ಆಹಾರ, ಉಡುಪು–ತೊಡಪು, ವಿಚಾರ, ವಿಹಾರ, ಜೀವನಕ್ರಮ ಆಯ್ಕೆಗಳು ಯಾವುದರಲ್ಲೂ ಹಸ್ತಕ್ಷೇಪ ಮಾಡಲೇಬಾರದೆನ್ನುವುದರ ಜೊತೆಗೆ ಮಗನ ಬದುಕೂ ತಮ್ಮಿಂದ ಬೇರೆಯಾಗಿದೆ ಅನ್ನುವುದು ನಿಧಾನಕ್ಕೆ ಮನವರಿಕೆಯಾಗತೊಡಗಿತು. ಅಷ್ಟು ಮೌನವಾಗಿ, ಮಧುರವಾಗಿ ಮಾತಾಡುತ್ತಿದ್ದ ಸೊಸೆಗೆ ಯಾವುದು ಇಷ್ಟು ಮಾತು ಕಲಿಸಿತು? ಇಂಥ ಧೋರಣೆ ಯಾವಾಗ ಬಂತೆಂದು ಯೋಚಿಸಿದರೆ ಉತ್ತರವೇ ಹೊಳೆಯಲಿಲ್ಲ. ಅವರದೇ ಮಾತಿನಲ್ಲಿ ಹೇಳುವುದಾದರೆ 'ಆಟಿಟ್ಯೂಡ್' ಅಂತ ಹೇಳಬಹುದಾದ ಅವರಿಬ್ಬರ ವರ್ತನೆಗಳಿಂದ ನೊಂದುಕೊಳ್ಳುತ್ತಾ ಇಷ್ಟಿಷ್ಟೇ ಅವರಿಂದ ದೂರ ಸರಿಯುತ್ತಾ ತನ್ನಪಾಡಿಗೆ ತಾನಿರುವುದನ್ನು ರೂಢಿಸಿಕೊಂಡರೂ ಒಳಗೊಳಗೆ ಆಗುವ ನಿರಾಸೆ, ದುಃಖಗಳನ್ನು ಅರಗಿಸಿಕೊಳ್ಳಲಾಗುತ್ತಿರಲಿಲ್ಲ ಸುನಂದೆಗೆ.



ವರ್ಷ ಆರಾದರೂ ಮಗುವೊಂದು ಹೆತ್ತುಕೊಳ್ಳುವ ಬಗ್ಗೆ ಯೋಚಿಸದಿದ್ದಾಗ ಅನಿವಾರ್ಯವಾಗಿ ಸೊಸೆಯ ಬಳಿ ಇನ್ನೊಂದು ಸುತ್ತಿನ ಮಾತುಕತೆಗೆ ಮುಂದಾದಳು ಸುನಂದೆ. ಹಾಗೆ ಮಾತಾಡಿದರೆ ಆಗಬಹುದಾದ ಅಡ್ಡ ಪರಿಣಾಮಗಳನ್ನು ಊಹಿಸಿಯೇ ಅಂತಹ ಮಾತುಕತೆಗೆ ಮುಂದಾದಳು. 'ನೋಡು ಸಿರೀಶಾ, ನಿನ್ನ ವೈಯಕ್ತಿಕ ಬದುಕಿನಲ್ಲಿ ಹಸ್ತಕ್ಷೇಪ ಮಾಡುತ್ತೇನೆಂದುಕೊಳ್ಳಬೇಡ. ಅದು ನನ್ನ ಉದ್ದೇಶವಲ್ಲ, ಈ ಮನೆಯ ಹಿರಿಯಳಾಗಿ, ನಿನ್ನ ಅತ್ತೆಯಾಗಿ ಕೇಳುವುದು ನನ್ನ ಕರ್ತವ್ಯ. ನಿನಗೇನಾದರೂ ತೊಂದರೆಯಿದ್ದರೆ ನನ್ನ ಹತ್ತಿರ ಹೇಳಿಕೊಳ್ಳಬಹುದು. ಒಳ್ಳೆಯ ಡಾಕ್ಟರರ ಬಳಿ ಕರೆದುಕೊಂಡು ಹೋಗುತ್ತೇನೆ. ನನಗೆ ಹೆಣ್ಣುಮಕ್ಕಳಿಲ್ಲ. ನೀನು ನನ್ನ ಮಗಳೆಂದುಕೊಂಡು ಕೇಳುತ್ತಿರುವೆ. ಅದೇನಿದೆಯೋ ಹೇಳು' ಎಂದಳು. ಸಿರ್ರನೆ ಏರಿದ ಸಿಟ್ಟಿನಿಂದ ಹಲ್ಲುಕಡಿಯುತ್ತಾ, 'ನನ್ನ ಸ್ವಂತ ಬದುಕಿನಲ್ಲಿ ಮೂಗು ತೂರಿಸಲು ಏನಾದರೊಂದು ನೆವ ತೆಗೆದು ಕಾಯುತ್ತಿರುತ್ತೀರಿ. ನೀವು ನನ್ನ ಅತ್ತೆಯಷ್ಟೆ. ತಾಯಿಯಲ್ಲ. ಒಂದು ಮಾತು ಹೇಳುತ್ತೀನಿ ಸ್ಪಷ್ಟವಾಗಿ, ಸರಿಯಾಗಿ ಕೇಳಿಸಿಕೊಳ್ಳಿ, ನನಗೇ ಮಗು ಬೇಕೆಂದಾಗ, ಬೇಕನ್ನಿಸಿದರೆ ನಾನು ಮಗು ಮಾಡಿಕೊಳ್ಳುವೆ. ನಿಮಗಾಗಿಯಾಗಲಿ ಬೇರೆ ಯಾರಿಗಾಗಿಯಾಗಲಿ ನಾನು ಮಕ್ಕಳು